ಮಾಡಿದರೆ, ಕೇಂದ್ರ ಸರ್ಕಾರದ ಜೊತೆ ಕರಾರು ಆಗಿರುತ್ತದೆ. ಇಂತಹ ಶಿಕ್ಷಕರನ್ನು ವರ್ಗಾವಣೆ ಅಥವಾ ಡೆಪ್ಯುಟೇಷನ್ ಮಾಡಬಾರದು ಎಂಬ ಕರಾರಿಗೆ ನಾವು ಬದ್ಧರಾಗಿರುತ್ತೇವೆ. ಇವರು ಆ ತರಹದ ಶಿಕ್ಷಕರು ಇರಬಹುದೋ ಏನೋ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಅವರ ವರ್ಗಾವಣೆ ಆಗದೆ ಇರಬಹುದು. ಇನ್ನು ಕೆಲವಾರು ಶಿಕ್ಷಕರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳಿವೆ ಎಂದು ಏನು ಹೇಳಿದ್ದಾರೆ, ಅದು ನನಗೆ ಗೊತ್ತಿಲ್ಲ. ಆದರೆ ಅಂತಹದ್ದು ಏನಾದರೂ ಇದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಅವರು ಶಿಕ್ಷಕರ ಕೆಲಸ ಮಾಡುತ್ತಿಲ್ಲ, ಸಮಾಜ ದ್ರೋಹಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಇವರು ಬ್ಲಾಕ್‌ಬೋರ್ಡ್ ಆಪರೇಷನ್ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಶಿಕ್ಷಕರಲ್ಲ. ಕಳೆದ 10-15 ವರ್ಷಗಳಿಂದ ಗುಂಡಪಲ್ಲಿಯಲ್ಲಿ ರಾಮರೆಡ್ಡಿ ಎನ್ನುವರು ಶಿಕ್ಷಕರಾಗಿದ್ದಾರೆ, ರಾಜರೆಡ್ಡಿ, ಬಿಚ್ಚರೆಡ್ಡಿ. ಇವರಿಬ್ಬರೂ ಕೂಡ ಆಪರೇಷನ್ ಬ್ಲ್ಯಾಕ್ ಬೋರ್ಡ್ ಶಿಕ್ಷಕರಲ್ಲ. ಇವರ ವರ್ಗಾವಣೆಯಾದರೂ ಸಹ ಡಿ.ಡಿ.ಪಿ.ಐ. ಯವರು ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳಿವೆ. ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಅಂತ ದಯಮಾಡಿ ತಿಳಿಸಿ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಕ್ರಿಮಿನಲ್ ಮೊಕದ್ದಮೆಗಳು ಇರುವುದನ್ನು ನನ್ನ ಗಮನಕ್ಕೆ ತಂದರೆ, ನಾನು ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತೇನೆ.

ಹೊಳೆನಾಗೂಪುರದ ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿ

71 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಹೊಳೆನಾಗೂಪುರ ಗ್ರಾಮದಲ್ಲಿರುವ ಕನ್ನಡ ಪ್ರಾಥಮಿಕ ಶಾಲೆ ಹಾಗೂ ಬೈಲಹೊಂಗಲ ಮಾಗಿಯವರ ಓಣಿಯಲ್ಲಿರುವ ಕನ್ನಡ ಪ್ರಾಥಮಿಕ ಶಾಲೆಗಳನ್ನು ಕೂಡಲೇ ದುರಸ್ಥಿ ಮಾಡಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿದೆಯೇ?

ಆ) ಸರ್ಕಾರದವರು ಆ ಶಾಲೆಗಳನ್ನು ಬೇಗನೆ ದುರಸ್ಥಿ ಮಾಡದೇ ಇರುವುದರಿಂದ ಅಲ್ಲಿರುವ ಕಟ್ಟಡದ ಸಾಮಾಗ್ರಿಗಳು ನಾಶವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆ 2 ಶಾಲಾ ಕಟ್ಟಡಗಳ ದುರಸ್ಥಿಗಾಗಿ ಜಿಲ್ಲಾ ಪರಿಷತ್ನವರು ಅಡಳಿತಾತ್ಮಕ ಮಂಜೂರಾತಿಯನ್ನು ನೀಡಿರುವರೇ ಹಾಗೂ ಎಷ್ಟು ಮೊತ್ತಕ್ಕೆ ಅಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ?

ಈ) ಆ ಶಾಲೆಗಳು ಶಿಥಿಲಗೊಂಡಿರುವುದರಿಂದ ಈಗ ಆ ತರಗತಿಗಳನ್ನು ಗುಡಿಯಲ್ಲಿ ನಡೆಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರ್ಕಾರದವರು ಕೂಡಲೇ ಆ ಶಾಲಾ ಕಟ್ಟಡದ ದುರಸ್ತಿ ಮಾಡಲು ಕ್ರಮ ಕೈಗೊಳ್ಳುವರೇ ಹಾಗೂ ಇನ್ನು ಎಷ್ಟು ದಿನಗಳಲ್ಲಿ ದುರಸ್ಥಿ ಮಾಡಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಅ) ಬಂದಿರುವುದಿಲ್ಲ. ಕೂಡಲೇ ಇದರ ಬಗ್ಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕರಿಗೆ ಸೂಚನೆ ನೀಡಲಾಗುವುದು.

ಇ) ಹೊಸ ಶಾಲಾ ಕಟ್ಟಡಗಳ ನಿರ್ಮಾಣ ಮಾಡಲು ನಿರ್ಧಾರ ಕೈಗೊಂಡಿದ್ದು ಆಡಳಿತಾತ್ಮಕ ಅನುಮೋದನೆಗೆ ಕಾಯದೆಯೇ ಕಟ್ಟಡ ನಿರ್ಮಾಣ ಕಾರ್ಯ ಕೈಗತ್ತಿಕೊಳ್ಳಲು ಜಿಲ್ಲಾ ಪಂಚಾಯತ್ನ ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಿರುತ್ತದೆ. ಆದ್ದರಿಂದ ದುರಸ್ತಿಗಾಗಿ ಆಡಳಿತಾತ್ಮಕ ಮಂಜೂರಾತಿಯ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಉ) ಶಾಲಾ ಕಟ್ಟಡ ಕಾರ್ಯ ಸದ್ಯದಲ್ಲೇ ಪ್ರಾರಂಭಗೊಳ್ಳುತ್ತಿದ್ದು, ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಾಹಕರಿಗೆ ನಿರ್ದೇಶನ ನೀಡಲಾಗುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನಮಗೆ ಕೊಟ್ಟಿರತಕ್ಕಂಥ ಉತ್ತರ ಸರಿಯಿಲ್ಲ, ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂದು ಹೇಳುತ್ತೇನೆ. ನನ್ನ ಮತದಾರರ ಕ್ಷೇತ್ರದಲ್ಲಿ ಎರಡು ಶಾಲಾ ಕೋಣೆಗಳನ್ನು ದುರಸ್ತಿ ಮಾಡುವ ಸಲುವಾಗಿ ಮನವಿಗಳನ್ನು ಕಳುಹಿಸಲಾಗಿದೆ. ನಾನು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಮುಖೇನ ತಿಳಿಸಿದ್ದೇನೆ. ಪ್ರಾಥಮಿಕ ಶಿಕ್ಷಣ ಮಂತ್ರಿಗಳಿಗೆ ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿಯವರಿಗೆ ಟೆಲಿಗ್ರಾಂ ಕಳುಹಿಸಿದ್ದೇನೆ. ಇವತ್ತು ಶಾಲೆಗಳಲ್ಲಿರುವ ಬೆಲೆ ಬಾಳುವ ಸಾಗುವಾನಿ ಮತ್ತಿತರ ಕಟ್ಟಿಗೆಗಳನ್ನು ಜನರು ತೆಗೆದುಕೊಂಡು ಹೋಗುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ದುರಸ್ತಿ ಕಾರ್ಯಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದೇವೆ ಎಂದು ಹೇಳಿದ್ದೀರಿ, ದುರಸ್ತಿ ಕೆಲಸವನ್ನು ಯಾರಿಗೆ ವಹಿಸಿಕೊಟ್ಟಿದ್ದೀರಿ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಇರತಕ್ಕಂಥಾದ್ದು ಬೆಳಿಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಹೊಳಿನಾಗಲಾಪುರ ಗ್ರಾಮದಲ್ಲಿರುವ ಕನ್ನಡ ಪ್ರಾಥಮಿಕ ಶಾಲೆ ಹಾಗೂ ಬೈಲ ಹೊಂಗಲದ ಮೂಗಿಯವರ ಓಣಿಯಲ್ಲಿರುವ ಕನ್ನಡ ಪ್ರಾಥಮಿಕ ಶಾಲೆಗಳನ್ನು ದುರಸ್ತಿ ಮಾಡುವ ವಿಷಯಕ್ಕೆ ಸಂಬಂಧಿಸಿದ್ದು. ಆ ಶಾಲೆಗಳು ಬಿರುಕು ಬಿಟ್ಟಿದ್ದು, ಪೂರ್ಣವಾಗಿ ಬಿದ್ದು ಹೋಗಿದ್ದು ಶಾಲೆಗಳನ್ನು ನಡೆಸಲಿಕ್ಕೆ ಯೋಗ್ಯವಲ್ಲವೆಂದು ವರದಿ ಬಂದಿದೆ. ಆ ಶಾಲೆಗಳು ಅಪಾಯಕರ ಸ್ಥಿತಿಯಲ್ಲಿರುವುದರಿಂದ ಈ ಎರಡಕ್ಕೂ ಹೊಸ ಕಟ್ಟಡಗಳನ್ನು ಕಟ್ಟಲು ಜಿಲ್ಲಾಪರಿಷತ್ತಿನಲ್ಲಿ ತೀರ್ಮಾನವಾಗಿದೆ. ಇದಕ್ಕೆ ಸಂಬಂಧಪಟ್ಟ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ. ಆಡಳಿತಾತ್ಮಕ ಅನುಮೋದನೆ ಸಿಗಬೇಕಾಗಿದೆ. ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಎರಡು ಶಾಲಾ ಕಟ್ಟಡಗಳನ್ನು ಕಟ್ಟಲು ಜಿಲ್ಲಾ ಪಂಚಾಯತ್ನ ಕಾರ್ಯ ನಿರ್ವಾಹಕರಿಗೆ ಆದೇಶ ಕಳುಹಿಸಲಿಕ್ಕೆ ಹೇಳಿದ್ದೇನೆ. ಇದಕ್ಕೆ 9 ಲಕ್ಷ ಬಡ್ಜೆಟ್ ಪ್ರಾವಿಷನ್ ಕೂಡ ಇರುವುದರಿಂದ ಕೂಡಲೆ ಕೆಲಸವನ್ನು ಪ್ರಾರಂಭ ಮಾಡಲಿ. ಮುಂದಿನ ಶೈಕ್ಷಣಿಕ ವರ್ಷಕ್ಕೆ ಎರಡೂ ಕಟ್ಟಡಗಳನ್ನು ಪೂರೈಸಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ದೊರೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಆದೇಶವನ್ನು ಕೊಟ್ಟಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ: ಮಾನ್ಯ ಅಧ್ಯಕ್ಷರೆ, ಹಾಲಿ ಶಾಲೆಯಲ್ಲಿರುವ ಬೆಲೆ ಬಾಳುವ ಸಾಮಗ್ರಿಗಳು ನಾಶವಾಗುತ್ತಿರುವುದು ಸರ್ಕಾರದ ಮುಂದಿದೆಯೇ? ನಾನು ಈ ವಿಚಾರದಲ್ಲಿ ತಮಗೆ ಟೆಲಿಗ್ರಾಂ ಕೊಟ್ಟಿದ್ದು ಹೌದೋ ಅಲ್ಲವೋ? ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಿಗೆ ಟೆಲಿಗ್ರಾಂ ಕೊಟ್ಟಿದ್ದು ಹೌದೋ ಅಲ್ಲವೋ?

ಇದರ ಬಗ್ಗೆ ಪತ್ರ ಕೂಡ ಬರೆದಿದ್ದೇನೆ, ಏನು ಕ್ರಮ ತೆಗೆದುಕೊಂಡಿದ್ದೀರಿ? 4 ಲಕ್ಷ ರೂಪಾಯಿ ಬೆಲೆ ಬಾಳುವ ಸಾಗುವಾನಿ ಮರ ನಾಶವಾಗಿದೆ. ಇದರ ಬಗ್ಗೆ ನನಗೆ ಉತ್ತರ ಬೇಕು. ಇದನ್ನು ಸರ್ಕಾರದ ಗಮನಕ್ಕೆ ತಂದರೂ.....

12.00 ನೂನ್

ಅವರು ಬಂದಿಲ್ಲ ಅಂದರೆ ಯಾವರೀತಿ ಬಂದಿಲ್ಲ ಎಂದು ಹೇಳಬೇಕಾಗುತ್ತದೆ. ನಾನು ಸುಳ್ಳು ಹೇಳಿರಬೇಕು ಇಲ್ಲ ಅಂದರೆ ಅವರು ಸುಳ್ಳು ಹೇಳುತ್ತಿರಬೇಕು ಎಂದು ಆಗುತ್ತದೆ. ನಾವು ಅವರಿಗೆ ಟೆಲಿಗ್ರಾಮ್ ಕೊಟ್ಟರೂ ಕೂಡ ಸರ್ಕಾರಕ್ಕೆ ಯಾವುದೇ ವರದಿ ಬಂದಿಲ್ಲ ಅಂದರೆ ಸರ್ಕಾರ ಇದೆಯೇ ಎಂದು ಕೇಳಬೇಕಾಗುತ್ತದೆ. ತಮಗೆ ಕೊಟ್ಟಿದ್ದೇನೆ, ರೂರಲ್ ಡೆವಲಪ್ಮೆಂಟ್ ಮಿನಿಸ್ಟರ್ಗೆ ಕೊಟ್ಟಿದ್ದೇನೆ, ನನಗೆ 20 ರೂಪಾಯಿ ಖರ್ಚಾಗಿದೆ. ಅವರು ಬಂದಿಲ್ಲ ಅಂದರೆ ಹೇಗೆ ಬಂದಿಲ್ಲ ಎಂದು ಹೇಳಬೇಕಾಗುತ್ತದೆ. ಅವರು ಫೈಲನ್ನು ತೆಗೆಸಿ ನೋಡಿ ಹೇಳಲಿ. ಸರ್ಕಾರದ ನಾಲ್ಕೈದು ಲಕ್ಷ ರೂಪಾಯಿ ಆಸ್ತಿ ಹಾಳಾಗಿದೆ ಅಂದರೆ ಇದಕ್ಕೆ ಹೊಣೆ ಯಾರು ಎಂದು ಕೇಳಬೇಕಲ್ಲವೆ? ಇವರು ಶಾಲೆ ರಿಪೇರಿ ಮಾಡಿಸಲಿ ಆದರೆ ಈಗ ಹಾಳಾಗಿರುವುದನ್ನು ಕೊಡುವವರು ಯಾರು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈ ಎರಡೂ ಬಿಲ್ಡಿಂಗ್ಗಳು ರಿಪೇರಿ ಮಾಡುವ ಸ್ಥಿತಿಯಲ್ಲಿ ಇಲ್ಲ. ಈ ಎರಡೂ ಬಿಲ್ಡಿಂಗ್ಗಳನ್ನು ಕೆಡವಿ ಹೊಸ ಬಿಲ್ಡಿಂಗ್ ಕಟ್ಟಲಿಕ್ಕೆ ತೀರ್ಮಾನ ಆಗಿದೆ. ಈಗ ಅವರು ಹೇಳುತ್ತಿರುವ ವಿಚಾರ ಅಂದರೆ ಈ ಬಿಲ್ಡಿಂಗ್ನಲ್ಲಿದ್ದ ಕಿಟಕಿ ಬಾಗಿಲುಗಳನ್ನು ಕದ್ದುಕೊಂಡು ಹೋಗುತ್ತಿದ್ದಾರೆ, ಅದನ್ನು ತೆಗೆದುಕೊಂಡು ಹೋಗಲಿಕ್ಕೆ ಬಿಡಬಾರದು ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಜಿಲ್ಲಾಪಂಚಾಯತ್ ಕಾರ್ಯದರ್ಶಿಯವರಿಗೆ ನಾನು ಈಗಾಗಲೇ ತಿಳಿಸಿದ್ದೇನೆ.

ಶ್ರೀ ಸಿ. ಬೈರೇಗೌಡ: ಅಲ್ಲಿ ಹಳೆಯ ಕಾಲದ ಕಟ್ಟಡ ಇರಬಹುದು, ಆದರೆ ಅಲ್ಲಿರತಕ್ಕಂಥ ತೇಗದ ಮರ ಏನಿದೆ, ಅದರ ಬೆಲೆ ಸುಮಾರು ಎರಡು, ಮೂರು ಲಕ್ಷ ರೂಪಾಯಿ ಆಗುತ್ತಿತ್ತು, ಆ ಮರವನ್ನು ಕದ್ದುಕೊಂಡು ಹೋಗಿದ್ದಾರೆ. ಅದಕ್ಕೋಸ್ಕರ ಟೆಲಿಗ್ರಾಮ್ ಕೊಟ್ಟಿದ್ದೇನೆ, ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ತಾವು ಉತ್ತರ ಹೇಳಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈ ಎರಡೂ ಶಾಲೆಗಳಲ್ಲಿದ್ದ ಮೂರ್ನಾಲ್ಕು ಲಕ್ಷ ರೂಪಾಯಿ ಬೆಲೆಯ ಮರ ತೆಗೆಮಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಆದರೂ ಸಹ ಇನ್ನು ಮುಂದೆ ಅದು ಆಗದೇ ಇರುವಂತೆ ನಾನು ಅವರಿಗೆ ತಿಳಿಸುತ್ತೇನೆ. ಇದು ರಿಪೇರಿ ಮಾಡುವ ಸ್ಥಿತಿಯಲ್ಲಿ ಇಲ್ಲದೇ ಇರುವುದರಿಂದ ಹೊಸ ಕಟ್ಟಡಗಳನ್ನು ನಾವು ಕಟ್ಟಿಸಿಕೊಡುತ್ತೇವೆ.

ಮಂಡ್ಯ ಜಿಲ್ಲೆಯಲ್ಲಿರುವ ಹಾಲು ಉತ್ಪಾದಕರಿಗೆ ಹಣ ಸಂದಾಯ ಮಾಡದಿರುವುದರ ಬಗ್ಗೆ

64 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಒಟ್ಟು ಎಷ್ಟು ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ?

ಆ) ಈ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ದಿನಂಪ್ರತಿ ಸಂಗ್ರಹವಾಗುವ ಹಾಲಿನ ಪ್ರಮಾಣ ಎಷ್ಟು?